# ತ್ರಿರತ್ನಗಳ ಸಾರರೂಪ

ಬೌದ್ಧ ಧರ್ಮ ಲೋಕದ ಇತರ ಸಾಂಸ್ಥಿಕ ಧರ್ಮಗಳಿಗಿಂತ ಭಿನ್ನವಾಗಿದೆ ಎಂದು ಹೇಳಲಾಗಿದೆ. ಕಾರಣ, ಅದು ದೇವರ ಇರುವನ್ನು, ಆತ್ಮದ ಇರುವನ್ನು ಒಪ್ಪಿಕೊಳ್ಳುವುದಿಲ್ಲ. ಯಾವುದನ್ನೂ ವ್ರತವೆಂದು ಹೇರುವುದಿಲ್ಲ. ಅದು ಪ್ರಕೃತಿಯ ಸಿದ್ಧಾಂತವನ್ನು ತಿಳಿಹೇಳುವ ಧರ್ಮ. ಪ್ರಶ್ನೆ ಮಾಡಬಹುದಾದ ಧರ್ಮ. ವೈಚಾರಿಕವೂ, ವೈಜ್ಞಾನಿಕವೂ ಆಗಿದೆ, ಇತ್ಯಾದಿ. 2500 ವರ್ಷಗಳಿಂದಲೂ ಇದರ ನಿರ್ವಚನ ಸಹಸ್ರಾರು ವಿದ್ವಾಂಸರಿಂದ, ಹಿಂಬಾಲಕರಿಂದ ನಡೆಯುತ್ತಲೇ ಇದೆ. ಬುದ್ಧನ ಸಮಕಾಲೀನನಾದ ಕೋಸಲ ರಾಜ್ಯದ ದೊರೆ ಪಸೇನದಿ ತನ್ನದೇ ಆದ ರೀತಿಯಲ್ಲಿ ವೈಶಿಷ್ಟ್ಯಪೂರ್ಣವಾಗಿ ಹೇಗೆ ಬುದ್ಧನ ಧರ್ಮ ಇಷ್ಟವಾಯಿತು ಎಂದು ತನ್ನ ಕೊನೆಯ ಭೇಟಿಯಲ್ಲಿ ಹೇಳುತ್ತಾನೆ. ಅದು ಸ್ವಾರಸ್ಯಮಯವೂ, ತುಂಬ ಆಪ್ಯಾಯಮಾನವೂ ಆಗಿದೆ.

ಒಮ್ಮೆ ಪಸೇನದಿ ದೇಶಸಂಚಾರದಲ್ಲಿದ್ದಾಗ ಮೇದಲುಂಪ ಎಂಬ ನಗರದ ಆಸುಪಾಸಿನಲ್ಲಿ ಬುದ್ಧ ತಂಗಿದ್ದಾನೆ ಎಂದು ತಿಳಿದು ತನ್ನ ರಥವನ್ನು ಅಲ್ಲಿಗೆ ನಡೆಸಲು ನಿರ್ದೇಶಿಸುತ್ತಾನೆ. ಬುದ್ಧ ವಿಶಾಲವಾದ ವನದ ಒಂದು ಮರದ ಕೆಳಗೆ ಪುಟ್ಟ ಗುಡಿಸಲಿನಲ್ಲಿ ಬಿಡಾರ ಹೂಡಿರುತ್ತಾನೆ. ಪಸೇನದಿಯ ಆಗಮನದಿಂದ ಬುದ್ಧನಿಗೆ ಅತೀವ ಸಂತೋಷವಾಗುತ್ತದೆ. ಶಿಷ್ಯರಾದ ಸಾರಿಪುತ್ತ ಮತ್ತು ಆನಂದರೂ ಜೊತೆಯಲ್ಲಿರುತ್ತಾರೆ. ರಾಜ ಪಸೇನದಿ ಆದರಾತಿಥ್ಯಗಳೊಂದಿಗೆ ಆಸೀನನಾಗಿ ಹೀಗೆ ಹೇಳುತ್ತಾನೆ.

ಭಗವಾನ್, ನಾವಿಬ್ಬರೂ ಹಳೆಯ ಸ್ನೇಹಿತರು, ಈಗ ವಯಸ್ಸಾಯಿತು. ನಿಮ್ಮೊಡನೆ ಹೇಳಿಕೊಳ್ಳುವುದು ಬಹಳಷ್ಟಿದೆ, ಆದರೆ ಬಹಳ ತಡವಾಯಿತು ಎನಿಸುತ್ತಿದೆ; ಎನ್ನುತ್ತಿದ್ದಂತೆಯೆ ಬುದ್ಧ ನಮ್ಮಿಬ್ಬರ ನಡುವೆ ಔಪಚಾರಿಕತೆಗೆ ಅವಕಾಶವಿಲ್ಲ, ಹೇಳಬೇಕಾದ್ದನ್ನು ನಿಸ್ಸಂಕೋಚವಾಗಿ ಹೇಳು ಎನ್ನುತ್ತಾನೆ.

ಭಗವಾನ್, ಅರಹಂತರಾದ ನಿಮ್ಮ ಮೇಲೆ, ಧಮ್ಮ ಮತ್ತು ಸಂಘದ ಮೇಲೆ ನನಗೆ ಸಂಪೂರ್ಣ ಶ್ರದ್ಧೆ ಇದೆ. ನಾನು ಇತರ ಧರ್ಮಗಳ ಸಾಧಕರನ್ನು, ಬ್ರಾಹ್ಮಣರನ್ನು ಮತ್ತು ಅವರ ಧಾರ್ಮಿಕ ಶ್ರದ್ಧೆಯನ್ನು ವರ್ಷಾನುಗಟ್ಟಲೆ ಗಮನಿಸಿದ್ದೇನೆ. ಅವರ ಮುಖಗಳಲ್ಲಿ ಚಿಂತೆ, ಆತಂಕ, ಅತೃಪ್ತಿ ಮತ್ತು ಕಷ್ಟಕಾರ್ಪಣ್ಯದ ಗೆರೆಗಳು ಮೂಡಿರುತ್ತವೆ. ಆದರೆ ನಿಮ್ಮ ಸಂಘಕ್ಕೆ ಸೇರಿದ ಭಿಕ್ಕುಗಳ ಮುಖಗಳಲ್ಲಿ ಅದಾವುದೂ ಇಲ್ಲ. ಪ್ರತಿಯಾಗಿ ಅವರು ಸದಾ ಆನಂದಿತರಾಗಿ, ಹಗುರವಾಗಿ, ನಿಶ್ಚಲರಾಗಿರುವುದನ್ನು ನೋಡಿದ್ದೇನೆ. ಆದ್ದರಿಂದ ದಮ್ಮದ ಮೇಲೆ, ನಿಮ್ಮ ಉಪದೇಶಗಳ ಮೇಲೆ ನನ್ನ ಶ್ರದ್ಧೆ ಗಟ್ಟಿಗೊಳ್ಳುತ್ತಿದೆ.

ಭಗವಾನರೆ, ನಾನು ಕ್ಷತ್ರಿಯ ಕುಲದ ರಾಜ. ಯಾರನ್ನಾದರೂ ಶಿಕ್ಷಿಸುವ, ಸೆರೆಮನೆಗೆ ತಳ್ಳುವ ಅಥವಾ ಮರಣದಂಡನೆ ವಿಧಿಸುವ ಅಧಿಕಾರ ನನಗಿದೆ. ಆದರೂ ಸಂಪುಟದ ಸಭೆಗಳಲ್ಲಿ ಸಚಿವರು ಮಧ್ಯೆ ಪ್ರವೇಶಿಸಿ ಗದ್ದಲ ಎಬ್ಬಿಸುತ್ತಾರೆ. ಆದರೆ ನಿಮ್ಮ ಸಂಘದಲ್ಲಿ ಸಾವಿರಕ್ಕೂ ಅಧಿಕವಾಗಿ ಭಿಕ್ಕುಗಳು ಕೂಡಿದ್ದರೂ ಗುಸುಗುಸು ಶಬ್ದವೂ ಇರುವುದಿಲ್ಲ ಅಥವಾ ಭಿಕ್ಕುಗಳು ಹೊದೆಯುವ ಚೀವರದ ಸರಪರ ಸದ್ದೂ ಕೇಳಿಸುವುದಿಲ್ಲ. ಅದೊಂದು ಪವಾಡ. ನೀವು ಕತ್ತಿಯನ್ನು ಝಳಪಿಸುವ ಅಥವಾ ಶಿಕ್ಷೆಯ ಬೆದರಿಕೆ ಹಾಕುವ ಅವಕಾಶವೇ ಇಲ್ಲದಂತೆ ಅವರು ನಿಮಗೆ ಗೌರವ ನೀಡುತ್ತಾರೆ. ಇದು ನನ್ನಲ್ಲಿ ನಿಮ್ಮ ಮತ್ತು ನಿಮ್ಮ ಉಪದೇಶಗಳ ಮೆಲಿನ ಶ್ರದ್ಧೆಯನ್ನು ಗಟ್ಟಿಗೊಳಿಸುತ್ತದೆ.

ಭಗವಾನರೆ, ಪ್ರಸಿದ್ಧ ವಿದ್ವಾಂಸರು, ಜ್ಞಾನಿಗಳು ಪೂರ್ವತಯಾರಿಯೊಂದಿಗೆ ಬಂದು ವಾದದಲ್ಲಿ ನಿಮ್ಮನ್ನು ಮಣಿಸಲು ಪ್ರಶ್ನೆಗಳ ಸುರಿಮಳೆಯನ್ನೇ ಹಾಕುವುದನ್ನು ನಾನು ನೋಡಿದ್ದೇನೆ. ಆದರೆ ನಿಮ್ಮನ್ನು ಸಂಧಿಸಿ ಧಮ್ಮವನ್ನು ತಿಳಿಯುತ್ತಿದ್ದಂತೆಯೆ ಅವರು ಆಶ್ಚರ್ಯಚಕಿತರಾಗಿ ಬಿಟ್ಟಬಾಯಿಯಲ್ಲಿಯೆ ತಮ್ಮ ನಿಷ್ಪ್ರಯೋಜಕ ಪ್ರಶ್ನೆಗಳನ್ನು ಮರೆಯುತ್ತಾರೆ ಮತ್ತು ನಿಮ್ಮ ಅನುಯಾಯಿಗಳೇ ಆಗಿಬಿಡುತ್ತಾರೆ. ಆದ್ದರಿಂದ ಇದೂ ಸಹ ನಿಮ್ಮ ಮತ್ತು ನಿಮ್ಮ ಉಪದೇಶಗಳ ಮೇಲೆ ನನ್ನ ಶ್ರದ್ಧೆಯನ್ನು ಗಟ್ಟಿಗೊಳಿಸಿದೆ.

ಭಗವಾನ್, ಇಸಿದತ್ತ ಮತ್ತು ಪೂರಣ ಎಂಬ ಇಬ್ಬರು ಕುಶಲಿಗಳಾದ, ನುರಿತ ಅಶ್ವಚಾಲಕರು ಅರಮನೆಯಲ್ಲಿ ಕೆಲಸಮಾಡುತ್ತಾರೆ. ಅವರ ಜೀವನೋಪಾಯ ನನ್ನಿಂದಲೇ ನಡೆಯುತ್ತದೆ. ಅವರು ನಿಮ್ಮ ಮೇಲೆ ಇರಿಸಿರುವ ಗೌರವಕ್ಕೆ ಹೋಲಿಸಿದರೆ ನನ್ನ ಮೆಲಿನ ಅವರ ಗೌರವ ಕಡಿಮೆಯೆಂದೇ ಹೇಳಬೇಕು. ಒಮ್ಮೆ ಹೀಗಾಯಿತು, ಅವರಿಬ್ಬರನ್ನು ಸಂಚಾರಕ್ಕೆ ನನ್ನೊಡನೆ ಕರೆದೊಯ್ದಿದ್ದೆ. ಆ ರಾತ್ರಿ ಬಿರುಗಾಳಿ ಮಳೆಗೆ ಸಿಲುಕಿ ಒಂದು ತಾಳೆ ಎಲೆಯ ಗುಡಿಸಿಲಿನಲ್ಲಿ ಆಶ್ರಯ ಪಡೆಯಬೇಕಾಗಿ ಬಂತು. ತಡರಾತ್ರಿಯವರೆಗೂ ಅವರು ನಿಮ್ಮ ಉಪದೇಶಗಳನ್ನು ಕುರಿತೇ ಮಾತಾಡುತ್ತಿದ್ದರು. ಕೊನೆಗೂ ಅವರು ಮಲಗಿದಾಗ ಅವರ ತಲೆಗಳು ಗೃಧ್ರಕೂಟದ (vulture peak) ಕಡೆಗೂ ಕಾಲುಗಳು ನನ್ನ ಕಡೆಗೂ ಇದ್ದವು. ನೀವು ಅವರಿಗೆ ಕೂಲಿ ಕೊಡುವುದಿಲ್ಲ, ಜೀವನ ನಿರ್ವಹಣೆ ನೋಡಿಕೊಳ್ಳುವುದಿಲ್ಲ, ಆದರೂ ಅವರು ನನಗಿಂತಲೂ ನಿಮ್ಮನ್ನು ಹೆಚ್ಚು ಗೌರವಿಸುತ್ತಾರೆ. ಈ ಕಾರಣದಿಂದಲೂ ಸಹ ನನಗೆ ನಿಮ್ಮ ಮತ್ತು ನಿಮ್ಮ ಉಪದೇಶಗಳ ಮೇಲೆ ಶ್ರದ್ಧೆ ಹೆಚ್ಚು ಗಟ್ಟಿಗೊಳ್ಳುತ್ತಿದೆ.

ಭಗವಾನರೆ, ನಾವಿಬ್ಬರೂ ಕ್ಷತ್ರಿಯ ಕುಲದವರು. ನಮ್ಮಿಬ್ಬರಿಗೂ ಈಗ ಎಪ್ಪತ್ತೆಂಟು ವರ್ಷಗಳು ತುಂಬಿವೆ. ನಮ್ಮಿಬ್ಬರ ಆತ್ಮೀಯ ಸ್ನೇಹ ಬಂಧನಕ್ಕೆ ಕೃತಜ್ಞತೆ ಹೇಳುವ ಅವಕಾಶ ಇಂದು ಒದಗಿ ಬಂತು. ನಿಮ್ಮ ಅನುಮತಿಯೊಂದಿಗೆ ನಾನಿನ್ನು ಹೊರಡುತ್ತೇನೆ.

ಬುದ್ಧ ಆಶೀರ್ವದಿಸಿ ಬಾಗಿಲವರೆಗೂ ಬಂದು ಕಳಿಸಿಕೊಡುತ್ತಾರೆ. ಪಕ್ಕದಲ್ಲಿಯೆ ಕೈಜೋಡಿಸಿ ನಿಂತಿದ್ದ ಸಾರಿಪುತ್ತ ಮತ್ತು ಆನಂದರಿಗೆ ಹೀಗೆ ಹೇಳುತ್ತಾರೆ. ಸಾರಿಪುತ್ತ, ಆನಂದ ಕೋಸಲದ ರಾಜ ಪಸೇನದಿ ಇದುವರೆಗೂ ಹೇಳಿದ ತನ್ನ ಅಂತರಂಗದ ಭಾವನೆಗಳು ಬುದ್ಧ, ಧಮ್ಮ, ಸಂಘ ಎಂಬ ತ್ರಿರತ್ನಗಳನ್ನು ಕುರಿತೇ ಆಗಿವೆ. ಇದನ್ನು ಇತರರಿಗೂ ತಿಳಿಹೇಳಿ ಧಮ್ಮದ ಮೇಲೆ ಅವರ ಶ್ರದ್ಧೆ ಗಟ್ಟಿಗೊಳ್ಳುವಂತೆ ಮಾಡಿ.

■ ಮೂಚಿ

## ಮಾತೇ ಮುತ್ತು

★ ಭಾರತ ನೂರಾರು ಸಮಸ್ಯೆಗಳ ತಾಣವಾಗಿರಬಹುದು. ಆದರೆ ಲಕ್ಷಾಂತರ ಪರಿಹಾರಗಳುಳ್ಳ ಸ್ಥಳವೂ ಹೌದು.

—ಕೈಲಾಶ್ ಸತ್ಯಾರ್ಥಿ

★ ಅನುಭವ ಎಂದರೆ ನಮ್ಮ ತಪ್ಪುಗಳಿಗೆ ಸುಮ್ಮನೆ ನಾವು ಕೊಡುವ ಹೆಸರು.

—ಆಸ್ಕರ್ ವೈಲ್ಡ್

★ ಯಾವುದೇ ಕೆಲಸದ ಅತ್ಯಂತ ಮುಖ್ಯ ಭಾಗವೆಂದರೆ ಆರಂಭ.

—ಪ್ಲೇಟೋ

★ ನಾವು ಅತಿಹೆಚ್ಚು ಗೋಡೆಗಳನ್ನು ಕಟ್ಟುತ್ತೇವೆ; ಬೇಕಾದಷ್ಟು ಸೇತುವೆಗಳನ್ನು ಕಟ್ಟುವುದಿಲ್ಲ.

—ಐಸಾಕ್ ನ್ಯೂಟನ್

★ ಬರೇ ತರ್ಕದಿಂದ ತುಂಬಿರುವ ಮನಸ್ಸು ಎರಡು ಅಲಗಿನ ಕತ್ತಿಯಂತೆ. ಆ ಕತ್ತಿ ಬಳಸಿದರೆ ಕೈಯಲ್ಲಿ ರಕ್ತ ಒಸರುವುದು ಖಚಿತ.

—ರವೀಂದ್ರನಾಥ ಠ್ಯಾಗೋರ್

★ ನಾವೆಲ್ಲರೂ ಹುಚ್ಚರಾಗಿಯೇ ಹುಟ್ಟುತ್ತೇವೆ. ಕೆಲವರು ಹಾಗೆಯೇ ಉಳಿದುಕೊಳ್ಳುತ್ತಾರೆ.

—ಸ್ಯಾಮುವೆಲ್ ಬೆಕೆಟ್

★ ದೇಶಪ್ರೇಮವೆಂದರೆ ನಿಮ್ಮ ದೇಶವನ್ನು ಸದಾಕಾಲ ಬೆಂಬಲಿಸುವುದು; ಆದರೆ ಸರ್ಕಾರವನ್ನು ಅಗತ್ಯ ಇದ್ದಾಗ ಮಾತ್ರ ಬೆಂಬಲಿಸುವುದು.

—ಮಾರ್ಕ್ ಟ್ವೈನ್

★ ಪ್ರಗತಿಯ ಮೊದಲ ಅಗತ್ಯವೇ ಭಿನ್ನಮತ.

—ಥಾಮಸ್ ಆಳ್ವ ಎಡಿಷನ್

★ ಲೇಖಕನೊಬ್ಬ ಬದುಕಿ, ಬರೆಯಲೆಂದು ಹಣ ಗಳಿಸಬೇಕು. ಆದರೆ ಹಣ ಗಳಿಸಲೆಂದೇ ಬದುಕುವುದು ಮತ್ತು ಬರೆಯುವುದು ಸರಿಯಲ್ಲ.

—ಕಾರ್ಲ್ ಮಾರ್ಕ್ಸ್

★ ಜನರ ಬಗ್ಗೆ ನಿಮ್ಮ ಕುತೂಹಲ ಕಡಿಮೆ ಇರಲಿ; ಅವರ ಆಲೋಚನೆಗಳ ಬಗ್ಗೆ ಹೆಚ್ಚು ಕುತೂಹಲ ಬೆಳೆಸಿಕೊಳ್ಳಿ.

—ಮೇರಿ ಕ್ಯೂರಿ

★ ಬುದ್ಧಿವಂತರು ಸಂತೋಷವಾಗಿರುವುದು ಬಹಳ ಅಪರೂಪ.

—ಅರ್ನೆಸ್ಟ್ ಹೆಮಿಂಗ್ವೇ